# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1661/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 18/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಮನೋಹರ ಸಂಗಪ್ಪ ಹೆಗರೆ, ಸದಲಗ ಗ್ರಾಮ ಮತ್ತು ಅಂಚೆ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಮನೋಹರ ಸಂಗಪ್ಪ ಹೆಗರೆ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ತನಗೆ ಸದಲಗ ಗ್ರಾಮ ಪಂಚಾಯತಿ ವತಿಯಿಂದ 1994 ರಲ್ಲಿ ಆಶ್ರಯ ಯೋಜನೆಯಡಿ ನಿವೇಶನವೊಂದನ್ನು ನೀಡಿದ್ದು, ಪಂಚಾಯತಿ ವತಿಯಿಂದ ಹಕ್ಕು ಪತ್ರವನ್ನು ಸಹ ನೀಡಿರುತ್ತಾರೆ. ಆದರೆ, ಸದರಿ ನಿವೇಶನವನ್ನು ತನಗೆ ಹಸ್ತಾಂತರಿಸಿರುವುದಿಲ್ಲ, ಈ ಬಗ್ಗೆ ವಿಚಾರಿಸಲಾಗಿ ತನಗೆ ಸರ್ವೆ‌ನಂ.784ರಲ್ಲಿ ನಿವೇಶನವನ್ನು ನೀಡುವುದಾಗಿ ತಿಳಿಸಿದ್ದು, ಇದುವರೆಗೂ ಸಹ ನಿವೇಶನವನ್ನು ನೀಡಿರುವುದಿಲ್ಲ. ದಿ:05/09/2013ರಲ್ಲಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು ದೂರುದಾರರಿಗೆ ಪತ್ರ ಬರೆದು, ದೂರುದಾರರಿಗೆ ನೀಡಿರುವ ಹಕ್ಕುಪತ್ರದಲ್ಲಿ ತೋರಿಸಿರುವ ಜಾಗದಲ್ಲಿ ಎಪಿಎಂಸಿ ಮಾರ್ಕೆಟ್ ನಿರ್ಮಿಸಿರುವುದರಿಂದ, ವಾಜಪೇಯಿ ನಿವೇಶನ ಹಂಚಿಕೆ ಯೋಜನೆಯಡಿಯಲ್ಲಿ ಸರ್ವೇ ನಂ.784ರಲ್ಲಿ ದೂರುದಾರರಿಗೆ ನಿವೇಶನ ನೀಡಲು ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆಂದು ಆದರೆ, ಇದುವರೆಗೂ ಯಾವುದೇ ನಿವೇಶನವನ್ನು ಮಂಜೂರು ಮಡಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ 159 ಫಲಾನುಭವಿಗಳಿಗೆ

ನಿವೇಶನಗಳನ್ನು 1994ರಲ್ಲಿ ಹಂಚಲಾಗಿತ್ತು, ಆದರೆ, ಸದಲಗ ಗ್ರಾಮ ಪಂಚಾಯತಿಯ ದಿ:08/04/2002ರ ಸಾಮಾನ್ಯ ಸಭೆಯಲ್ಲಿ ಸದರಿ ನಿವೇಶನಗಳ ಮಂಜೂರಾತಿಯನ್ನು ರದ್ದುಗೊಳಿಸಲು ನಿರ್ಣಯ ತೆಗೆದುಕೊಳ್ಳಲಾಗಿದ್ದು, ಅದರಲ್ಲಿ, ದೂರುದಾರರ ನಿವೇಶನವನ್ನು ರದ್ದುಗೊಳಿಸಲು ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ. 159 ಫಲಾನುಭವಿಗಳಿಗೆ ಮಂಜೂರಾಗಿದ್ದ ಜಾಗದಲ್ಲಿ ಎಪಿಎಂಸಿ ಮಾರುಕಟ್ಟೆ ನಿರ್ಮಿಸುವ ಸಲುವಾಗಿ ಸದರಿ ನಿವೇಶನಗಳ ಮಂಜೂರಾತಿಯನ್ನು ರದ್ದುಪಡಿಸಲಾಯಿತ್ತೆಂದು, ಬೇರೆ ಸ್ಥಳವನ್ನು ಮಂಜೂರು ಮಾಡಬೇಕೆಂದು ತಹಶೀಲ್ದಾರ್, ಚಿಕ್ಕೋಡಿ ಇವರಿಗೆ ಕೋರಿಕೊಂಡಿದ್ದು, ಬೇರೆ ಸ್ಥಳ ಮಂಜೂರಾದ ತಕ್ಷಣ ಎಲ್ಲಾ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಲಾಗುವುದು ಎಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರುಗಳ ಆಕ್ಷೇಪಣೆಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತವನ್ನು ಸಲ್ಲಿಸಿ, ಮಂಜೂರಾದ ನಿವೇಶನಗಳನ್ನು ರದ್ದುಪಡಿಸಲು ಪುರಸಭೆಯವರಿಗೆ ಅಧಿಕಾರವಿರುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ನಿವೇಶನ ರದ್ದತಿಯು ಕಾನೂಬಾಹಿರವಾಗಿರುತ್ತದೆಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು ಹಾಗೂ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರಿಗೆ ಆಶ್ರಯ ಯೋಜನೆಯಡಿಯಲ್ಲಿ ಸದಲಗ ಗ್ರಾಮದ ಸರ್ವೆ ನಂ.795/1ಬಿ ಯಲ್ಲಿ 7.50ಮೀ.,x10 ಮೀ., ವಿಸೀರ್ಣದ ನಿವೇಶನವನ್ನು ದಿ:06/06/1994ರಂದು ಮಂಜೂರು ಮಾಡಿರುವುದು ಸ್ಪಷ್ಟ ಪಡುತ್ತದೆ. ಪುರಸಭೆಯ ದಿ:01/04/2002ರ ನಡವಳಿಯನ್ನು ಪರಿಶೀಲಿಸಿದಲ್ಲಿ, ಆಶ್ರಯ ಯೋಜನೆಯಡಿಯಲ್ಲಿ 159 ಪಲಾನುಭವಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿತ್ತೆಂದು ಹಾಗೂ ಅವರುಗಳ ನಿವೇಶನ ಮಂಜೂರಾತಿಯನ್ನು ರದ್ದುಪಡಿಸುವ ಬಗ್ಗೆ ತೀರ್ಮಾನ ಕೈಗೊಂಡಿರುವುದು ಸಹ ಕಂಡು ಬಂದಿರುತ್ತದೆ. (ಸದರಿ ಠರಾವಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಫಲಾನುಭವಿಗಳ ಪಟ್ಟಿಯಲ್ಲಿ ದೂರುದಾರರ ಹೆಸರು 159 ಕ್ರಮಸಂಖ್ಯೆಯಲ್ಲಿರುತ್ತದೆ. ಸದರಿ ಠರಾವಿನಲ್ಲಿ ಕೈಗೊಂಡಿರುವ ನಿರ್ಣಯವು ಕಾನೂನುಬಾಹಿರವೆಂದು ಕಂಡು ಬರುತ್ತದೆ. ಒಮ್ಮೆ ಮಂಜೂರಾದ ನಿವೇಶನವನ್ನು ರದ್ದುಪಡಿಸಲು ಜಿಲ್ಲಾಧಿಕಾರಿಯರವರ ಅನುಮತಿ ಬೇಕಾಗಿರುತ್ತದೆ (ಕರ್ನಾಟಕ ಲ್ಯಾಂಡ್ ಗ್ರಾಂಟ್ ರೂಲ್ಸ್ ಕಲಂ (25)ರಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಂಜೂರು ಮಾಡಿದ ಭೂಮಿಯ ಯಾವುದೇ ಮಂಜೂರಾತಿಯನ್ನು ರದ್ದುಗೊಳಿಸಲು ಅಧಿಕಾರ ಇರುತ್ತದೆ). ಕರ್ನಾಟಕ ಪುರಸಭೆಗಳ ಅಧಿನಿಯಮದ ಪ್ರಕಾರ ಯಾವುದೇ ಠರಾವಿನ ರದ್ದತಿ ಮಾಡುವಾಗ ಸದರಿ ಪುರಸಭೆಗಳ ಕಾಯ್ದೆಯ ಕಲಂ (55)ರಡಿಯಲ್ಲಿ ನೀಡಿರುವ ನಿಬಂಧನೆಗಳನ್ನು ಪರಿಪಾಲಿಸಬೇಕಾಗಿರುತ್ತದೆ. ಆದರೆ, ಅಂತಹ

ಯಾವುದೇ ನಿಬಂಧನೆಗಳನ್ನು ಅಥವಾ ಕ್ರಮವನ್ನು ಕೈಗೊಂಡಿರುವುದಿಲ್ಲ. ಆಶ್ರಯ ಯೋಜನೆಯಡಿಯಲ್ಲಿ ಆಶ್ರಯ ಕಮಿಟಿ ಇದ್ದು, ಅದಕ್ಕೆ ಸ್ಥಳೀಯ ಶಾಸಕರು ಮುಖ್ಯಸ್ಥರಾಗಿರುತ್ತಾರೆ. ಪುರಸಭೆಯ ಅಧ್ಯಕ್ಷರು ಸದರಿ ಆಶ್ರಯ ಕಮಿಟಿಗೆ ಸದಸ್ಯರಾಗಿರುತ್ತಾರೆ. ಆಶ್ರಯ ಯೋಜನೆಯಡಿಯಲ್ಲಿ ಮುಖ್ಯಾಧಿಕಾರಿಯವರು ಹಕ್ಕು ಪತ್ರವನ್ನು ನೀಡಲು ಹಕ್ಕುಳ್ಳವರಾಗಿರುವುದಿಲ್ಲ. ಈ ಪ್ರಕರಣದಲ್ಲಿ ಈಗಾಗಲೇ ತಿಳಿಸಿರುವಂತೆ ಆಶ್ರಯ ಯೋಜನೆಯಡಿಯಲ್ಲಿ 1994ನೇ ಇಸವಿಯಲ್ಲಿ ಸದಲಗಾ ಪುರಸಭಾ ವತಿಯಿಂದ ಸರ್ವೇ ನಂಬರ್ 795/1–ಬಿ ಯಲ್ಲಿ ರಚಿಸಲಾಗಿದ್ದ ನಿವೇಶನಗಳನ್ನು 159 ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ಹಂಚಿಕೆ ಮಾಡಲಾಗಿದ್ದ ನಿವೇಶನಗಳ ಹಕ್ಕುಪತ್ರಗಳನ್ನು ಪುರಸಭೆಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಿ ಅದನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಆಶ್ರಯ ಸಮಿತಿಗೆ ನಿವೇಶನ ಹಂಚಿಕೆಗಾಗಿ ಜಾಗವನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳು ನೀಡಿರುತ್ತಾರೆ ಹಾಗೂ ಸದರಿ ನಿವೇಶನವನ್ನು ರದ್ದುಗೊಳಿಸುವ ಅಧಿಕಾರ ಮೇಲೆ ತಿಳಿಸಿದಂತೆ ಜಿಲ್ಲಾಧಿಕಾರಿಯವರ ಅನುಮತಿ ಇಲ್ಲದೆ ರದ್ದುಗೊಳಿಸಲು ಬರುವುದಿಲ್ಲ. ಆದ್ದರಿಂದ, ನಿವೇಶನಗಳನ್ನು ರದ್ದುಗೊಳಿಸಿದ ಕ್ರಮ ನ್ಯಾಯಯುತವಾಗಿರುವುದಿಲ್ಲ. ಮುಖ್ಯಾಧಿಕಾರಿ, ಸದಲಗ ಪುರಸಭೆ ಇವರು ತಮ್ಮ ದಿ:13/05/2015ರ ಪತ್ರದಲ್ಲಿ ತಾನು ಪುರಸಭೆಗೆ ಮುಖ್ಯಾಧಿಕಾರಿಯಾಗಿ ಬಂದು 2 ವರ್ಷಗಳು ಆಗಿರುತ್ತದೆ ಎಂದು ಹಾಗೂ ನಿವೇಶನದ ಹಕ್ಕುಪತ್ರಗಳನ್ನು ರದ್ದುಗೊಳಿಸಿರುವ ವಿಷಯವು 12 ವರ್ಷಗಳ ಹಳೆಯದ್ದಾಗಿರುತ್ತದೆ ಎಂದು ಈಗ ಸದಲಗ ಪುರಸಭೆ ವತಿಯಿಂದ ಸರ್ವೇ ನಂ.704 ರಲ್ಲಿ 6 ಎಕರೆ 25 ಗುಂಟೆ ಜಮೀನು ನಿವೇಶನ ಹಂಚುವುದಕ್ಕಾಗಿ ಮಂಜೂರಾಗಿದ್ದು, ಸದರಿ ಜಮೀನಿನ 2 ಎಕರೆ 20 ಗುಂಟೆ ಜಾಗದಲ್ಲಿ ಶ್ರೀ ಹೊನಸಿದ್ದ ದೇವಸ್ಥಾನ ಇರುವುದರಿಂದ, ಬೇರೆ ಜಾಗವನ್ನು ನೀಡಲು ಮಾನ್ಯ ತಹಶೀಲ್ದಾರ್, ಚಿಕ್ಕೋಡಿ ಇವರಲ್ಲಿ ಪತ್ರ ವ್ಯವಹಾರ ಮಾಡಲಾಗಿದೆ ಎಂದು ಹಾಗೂ ಪೂರ್ಣ 6 ಎಕರೆ 25 ಗುಂಟೆ ಮಂಜೂರಾದ ನಂತರ ಫಲಾನುಭವಿಗಳಿಗೆ ನಿವೇಶನಗಳನ್ನು ನೀಡಲು ಮೇಲಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಆದರೆ, ಇದುವರೆಗೂ ಅವರು ತಿಳಿಸಿದಂತೆ ಜಮೀನು ಪಡೆದು ನಿವೇಶನಗಳ ಹಂಚಿಕೆಗೆ ಕ್ರಮ ಜರುಗಿಸಿರುವ ಬಗ್ಗೆ ಕಂಡು ಬರುವುದಿಲ್ಲ (ಮೇಲೆ ತಿಳಿಸಿದಂತೆ ದೂರುದಾರರು ಸಹ ಹಕ್ಕುಪತ್ರಗಳ ರದ್ದತಿಯಲ್ಲಿ ಒಳಗೊಂಡ ಪಲಾನುಭವಿಯಾಗಿರುತ್ತಾರೆ).

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸದಲಗ ಪುರಸಭಾ ವತಿಯಿಂದ ಈ ಹಿಂದೆ ಸರ್ವೇ ನಂಬರ್:795/1ಬಿ ಯಲ್ಲಿ ರಚಿಸಲಾಗಿದ್ದ ನಿವೇಶನಗಳನ್ನು ಹಕ್ಕುಪತ್ರದಡಿ ಫಲಾನುಭವಿಗಳಿಗೆ**

ನಿವೇಶನಗಳನ್ನು ಹಂಚಿದ್ದು, ಅದನ್ನು ಎಪಿಎಂಸಿ ಯಾರ್ಡ್ ಕಟ್ಟುವ ಸಲುವಾಗಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದ್ದ ಹಕ್ಕುಪತ್ರಗಳನ್ನು ರದ್ದುಗೊಳಿಸಿದ್ದು, ಅವರಿಗೆ ಬೇರೆ ನಿವೇಶನಗಳನ್ನು ಇಲ್ಲಿಯವರೆಗೂ ಹಂಚದೆ ಇರುವುದರಿಂದ, ಸದರಿ ಫಲಾನುಭವಿಗಳಿಗೆ (ದೂರುದಾರರನ್ನು ಸೇರಿಸಿ) ಪರ್ಯಾಯ ನಿವೇಶನಗಳನ್ನು ಹಂಚಲು ತಕ್ಷಣವೇ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.